(ಶ್ರೀ ಎಚ್. ಎಂ. ಚನ್ನಬಸಪ್ಪ)

ಕೂಡ ಇನ್ನೂ ಮುಗಿದಿಲ್ಲ. ಇಷ್ಟು ಕೆಲಸಗಳನ್ನು ಸರ್ಕಾರದವರೀಗ ಮಂಜೂರು ಮಾಡಲು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಎಂ. ರಾಜಶೇಖರಮೂರ್ತಿ.—ಈ ಪುರದ ವಿಷಯವಾಗಿ ಏಕೆ ನಿಧಾನವಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಶೇಕಡ 7½ ರೂಪಾಯಿ ಉತ್ಪತ್ತಿ ಬರತಕ್ಕಂಥ ಗ್ರಾಮಗಳ ಹೆಸರನ್ನು ತಿಳಿಸಬೇಕೆಂದು ತಾವು ಕೇಳಿದ್ದೀರಿ. ಆದರೆ ಆ ಗ್ರಾಮದ ಉತ್ಪತ್ತಿ ಶೇಕಡ 7½ ರೂಪಾಯಿಗಿಂತ ಕಮ್ಮಿ ಬರಬಹುದು. ಆದರೆ ಹೆಗ್ಗೋಡು ದೇಶವಳ್ಳಿ ಗ್ರಾಮಗಳಿಂದ ಉತ್ಪತ್ತಿ ಶೇಕಡ 8 ರೂಪಾಯಿ ಬರುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಈ ಉಡಿಗಾಲದ ಅಂಧಾಜು ತಯಾರಾಗಿ ಎಷ್ಟು ದಿವಸವಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಉಮ್ಮತ್ತೂರಿನ ಅಂದಾಜು ಬಂದಿದೆ.

ಶ್ರೀ ಯು. ಎಂ. ಮಾದಪ್ಪ.—ತಾವು ಇಲ್ಲಿಗೆ ಎರಡು ತಿಂಗಳ ಕೆಳಗೇ ಪತ್ರ ಬರೆದು ಆ ಕೆಲಸ ಮಂಜೂರು ಮಾಡಿದ್ದೇವೆ ಎಂದು ತಿಳಿಸಿರಲಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ಪತ್ತಿ ಬರುವಂತಿದ್ದರೆ ಆ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರದವರ ಅಭ್ಯಂತರವೇನೂ ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ತಾವು ಇನ್ನು ಎಷ್ಟು ವರ್ಷಗಳಲ್ಲಿ ಈ ಕೆಲಸವನ್ನು ಪೂರೈಸುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್ನೂ ಸ್ವಲ್ಪ ಕಾಲ ಬೇಕು. ಅಷ್ಟೇ ಹೊರತು ವರ್ಷಗಳೇನೂ ಬೇಕಾಗಿಲ್ಲ.

Leather Stitching Expert (Appointment)

Q.—352. Sri G. DUGGAPPA (Holalkere—Scheduled Castes).—

Will the Government be pleased to state :—

(*a*) whether they have sanctioned a post of Leather Stitching Expert in the State under Cottage Industries Scheme ;

(*b*) the number and date of the Government Order appointing a Leather Stitching Expert ;

(*c*) whether the order was given effect to?

A.—Sri H. M. CHANNABASAPPA (Minister for Industries).—

(*a*) Yes.

(*b*) The appointment has not been made.

(*c*) The vacancy of Expert has been reported to the Public Service Commission for notifying the same in *Mysore Gazette*. Selection of a suitable candidate to the post will be made on receipt of applications from the Public Service Commission.

Sri G. DUGGAPPA.—May I know when the post was sanctioned ?

*Sri H. M. CHANNABASAPPA.—The post was sanctioned on 1-6-54.

Sri G. DUGGAPPA. – Is it not a fact that one incumbent was already working in that place ?

Sri H. M. CHANNABASAPPA.—The post was sanctioned long time back and given up for some time as an economy measure, but subsequently on 1-6-54 it was renewed.

ಶ್ರೀ ಎಂ. ಪಳನಿಯಪ್ಪನ್.—ತಾವೀಗ ಈ ಚರ್ಮ ಹೊಲಿಯುವುದರಲ್ಲಿ ಪ್ರವೀಣತೆಯನ್ನು ಹೊಂದಿರುವ ಒಬ್ಬ ಆಫೀಸರನ್ನು ನೇಮಕ ಮಾಡುವುದು ಈ ಚರ್ಮ ಹೊಲೆಯುವ ಕೆಲಸದಲ್ಲ ಶಿಕ್ಷಣ ಕೊಡುವುದಕ್ಕಾಗಿ ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪೋಸ್ಟ್ ಮಂಜೂರಾಗಿದೆ. ಆದರೆ ಇನ್ನೂ ಯಾರನ್ನೂ ನೇಮಕ ಮಾಡಿಲ್ಲ.

Rural Industrialisation Scheme (Expenditure on Staff)

Q.—380. Sri A. BHEEMAPPA NAIK (Molakalmuru).—

Will the Government be pleased to state:—

(*a*) the number of officers employed in the Rural Industrialisation Scheme and their salary ;

(*b*) whether they have received any training to fit themselves for the position to which they are employed.

(*c*) the total establishment and other expenses per annum ?

A.—Sri H. M. CHANNABASAPPA (Minister for Industries).—

(*a*) Sixteen Gazetted Officers are working in the Rural Industrialisation Department. Their total salary per mensem Rs. 7,027-8-0.

(*b*) Yes.

(*c*) (i) During 1954-55, a sum of Rs. 1,68,888 was spent on establishment. In the current year, Rs. 98,051 have been spent up to end of July 1955. This is borne by Government.

(ii) Rs. 2·76 lakhs per annum is payable by Rural Industrialisation Societies to the Group Inspectors.

Sri A. BHEEMAPPA NAIK.—How many Training Centres have you started? Which are all the Training Centres that make them fit for jobs to which they are put?

*ಶ್ರೀ ಎಚ್. ಎಂ. ಚನ್ನಬಸಪ್ಪ.—16 ಜನ ಆಫೀಸರಿಗೋ ಅಷವಾ ಎಲ್ಲರಿಗೋ?

ಶ್ರೀ ಎ. ಭೀಮಪ್ಪನಾಯಕ್.—ಅಲ್ಲಿ ಕೆಲಸ ಮಾಡತಕ್ಕ ಎಲ್ಲಾ ಆಫಿಕಾರಿಗಳಿಗೂ ಎಷ್ಟು Training Centre ಗಳನ್ನು ಮಾಡಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗ್ರೂಪ್ ಇಕ್ಸೆಕ್ಟರ್ಸ್‌ಗೆ ಸುಮಾರು ಆರು ವಾರಗಳ ಟ್ರೈನಿಂಗ್ ದ್ದೇವೆ. Executive Officersಗೆ ಆಫೀಸಿನಲ್ಲಿ ಯಾವ ಯಾವ ಕೆಲಸಗಳನ್ನು ಯಾವ ಯಾವ ರೀತಿ ಮಾಡಬೇಕೆನ್ನುವ ಸೂಚನೆಗಳನ್ನು ಕೊಟ್ಟು ಕಳುಹಿಸಿ ಕೊಟ್ಟಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—Training ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಎಲ್ಲಿ ಟ್ರೈನಿಂಗ್ ಕೊಟ್ಟಿರಿ? ಆರು ವಾರಗಳು ಎಲ್ಲೆಲ್ಲಿ ಕೆಲಸ ಮಾಡಿದ್ದಾರೆ? ಪಾಠ ಹೇಳಿಕೊಡುವುದಕ್ಕೆ ಸ್ಥಳಗಳು ಎಲ್ಲವೆ? ಎಷ್ಟು centres ಇವೆ ಎಂಬುದನ್ನು ಕೇಳುತ್ತಿದ್ದೇನೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ ಇಷ್ಟು ಹೇಳಬಹುದು. ಅವರಿಗೆ Training ಕೊಟ್ಟು ಎಲ್ಲಾ ಕೈಗಾರಿಕೆಗಳಲ್ಲೂ ಪರಿಣತರನ್ನಾಗಿ ಮಾಡುವುದು ಅನಾವಶ್ಯಕ. ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಲು ಎಷ್ಟು broad-based ತಿಳುವಳಿಕೆ ಬೇಕೋ, ಅಷ್ಟು broad-based ತಿಳಿವಳಿಕೆಯನ್ನು ಅವರಿಗೆಲ್ಲಾ ಕೊಟ್ಟಿದೆ.

ಶ್ರೀ ಎ. ಭೀಮಪ್ಪನಾಯಕ್. ಎಷ್ಟು ವಿಧವಾದ ಕೈಗಾರಿಕೆಗಳನ್ನು ಮೈಸೂರು ದೇಶದಲ್ಲಿ ಮಾಡಬೇಕು ಎಂದು ಯೋಚಿಸಲಾಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಯಾವ ಕೈಗಾರಿಕೆಗಳಲ್ಲಿ ಜನರಿಗೆ ಕೆಲಸ ದೊರಕಬಹುದೊ, ಯಾವ ಯಾವ ಕೈಗಾರಿಕೆಗಳಿಂದ ದೇಶದ ಸಂಪತ್ತು ಹೆಚ್ಚಬಹುದೊ, ಅಂಥ ಕೈಗಾರಿಕೆಗಳನ್ನು ತೆಗೆದು ಕೊಳ್ಳಬೇಕೆಂಬುದು ಸರಕಾರದ ಅಭಿಪ್ರಾಯ.

ಶ್ರೀ ಎ. ಭೀಮಪ್ಪನಾಯಕ್.—ಪಟ್ಟಿಯನ್ನು ಏನಾದರೂ ಮಾಡೋಣವಾಗುತ್ತದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ ಎಂ. ವಿಶ್ವೇಶ್ವರಯ್ಯನವರ scheme ನ ಪುಸ್ತಕವನ್ನು ಮಾನ್ಯ ಸದಸ್ಯರಿಗೆ ಕೊಟ್ಟಿದಾರೆ ಎಂದು ತಿಳಿದು ಕೊಂಡಿದ್ದೇನೆ. ಒಂದು ವೇಳೆ ಕೊಡದಿದ್ದರೆ ಕೊಡುತ್ತೇವೆ. ಅದರಲ್ಲಿ ನೋಡಬಹುದು.

ಶ್ರೀ ಎ. ಭೀಮಪ್ಪನಾಯಕ್.—ಹಳ್ಳಿಗಳಲ್ಲಿ ಬ್ರೆಡ್ ಮಾಡಿ ಮಾರುವ village bakeries ಮೈಸೂರು ದೇಶದಲ್ಲಾಗಲಿ ಭಾರತ ದೇಶದಲ್ಲಾಗಲಿ ಎಲ್ಲಾದರೂ ಇರುವುದನ್ನು ನೋಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದು ಲಾಭದಾಯಕವಾಗಿ ಕಂಡು ಬರುತ್ತದೋ ಅದನ್ನು ಮಾಡಬಹುದು. ಅಂತಹ ಕೈಗಾರಿಕೆಗಳನ್ನು include ಮಾಡಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—Bakingಗೆ ಬೇಕಾದಂಥ ಟ್ರೈನಿಂಗ್ ಮತ್ತು ಬುದ್ಧಿವಂತಿಕೆ ಹೇಳಿಕೊಡುವುದಕ್ಕೆ ಬೇಕಾದಷ್ಟು ಶಿಕ್ಷಣವನ್ನು ಮತ್ತು technicians ಕೊಟ್ಟಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ನೇಮಕ ಮಾಡಿರತಕ್ಕವರು ಜನರಿಗೆ ಆಯಾ ಉದ್ಯಮಗಳಲ್ಲಿ ಶಿಕ್ಷಣ ಕೊಡಬೇಕು ಎನ್ನುವ ಉದ್ದೇಶವಿಲ್ಲ. ಶಿಕ್ಷಣ ಕೊಡತಕ್ಕವರು ಬೇರೆ ಇರುತ್ತಾರೆ. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅವರಿಗೆ ಯಾವ ಯಾವ ಸಹಾಯ ಸೌಲಭ್ಯಗಳನ್ನು ಸರಕಾರದವರು ಒದಗಿಸಿಕೊಡಬಹುದು ಅವರು ಎಲ್ಲೆಲ್ಲಿ ಶಿಕ್ಷಣವನ್ನು ತೆಗೆದುಕೊಳ್ಳಬಹುದು.— ಈ ವಿಚಾರದಲ್ಲಿ ತಿಳಿವಳಿಕೆಯನ್ನು ಅವರು ಕೊಡುತ್ತಾರೆ. ಅದಲ್ಲದೆ ಎಲ್ಲ ಕೈಗಾರಿಕೆಗಳಲ್ಲೂ ಅವರು ಪರಿಣತರು ಆಗಿರಬೇಕು ಎಂಬ ಅಭಿಪ್ರಾಯದಿಂದ ಅವರನ್ನು ನೇಮಕಮಾಡಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಉಪಾಧ್ಯಾಯರಿಗೆ ವೃತ್ತಿಗೊತ್ತಿಲ್ಲದೆ, ವಿದ್ಯಾರ್ಥಿಗೆ ಪಾಠ ಹೇಳಿಕೊಡುವ ಶಕ್ತಿಯಾಗಲಿ ಆದಕ್ಕೆ ಬೇಕಾದಂಥ know-how ಪರಿಣತಿ ಇಲ್ಲದಿದ್ದರೆ, ಅವರಿಂದ ಏನಾದರೂ ಉಪಯೋಗವಾಗುತ್ತದೆಯೇ? ಈ ರೀತಿ ಇಕ್ಸೆಕ್ಟರ್ಸ್‌ಗೆ ಆರು ವಾರಗಳ ಶಿಕ್ಷಣ ಎಷ್ಟು ಕೊಟ್ಟರು ಎನ್ನುವುದು ಗೊತ್ತಿಲ್ಲ. ಹೀಗೆ ಆರುವಾರಗಳ ಶಿಕ್ಷಣ ಕೊಟ್ಟು ಕಳುಹಿಸಿದರೆ, ಅವರು ಮೈಸೂರು ದೇಶದ ನಾನ್ನೂ ಕೈಗಾರಿಕೆಗಳನ್ನು ಮೇಲಕ್ಕೆ ಎಳ್ತುವದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಸರಕಾರದವರು ತಿಳಿದುಕೊಂಡಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅನುಮಾನಕ್ಕೆ ಎಡೆ ಇಲ್ಲದಂತೆ ತಿಳಿಸಿದ್ದೇನೆ. ಇವರೆಲ್ಲರೂ ಕೂಡ ಎಲ್ಲ ಕೈಗಾರಿಕೆಗಳಲ್ಲೂ ಪರಿಣತರು ಎಂದು ಅಭಿಪ್ರಾಯಪಟ್ಟಿಲ್ಲ. ಪರಿಣತರನ್ನಾಗಿ ಮಾಡಬೇಕೆಂದು ಸರಕಾರದ ಅಭಿಪ್ರಾಯವಿಲ್ಲ, ಅದು ಸಾಧ್ಯವಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಆದ್ದರಿಂದ ಅವರಿಗೆ ಸಾಕಷ್ಟಾದಷ್ಟು ದಕ್ಷತೆ ಇಲ್ಲದೆ ಇರೋಕಾದ್ದರಿಂದ, ಸ್ಕೀಮುಗಳನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ ಬಂತಾಗುತ್ತದೆ ಎನ್ನುವುದನ್ನು ಸರಕಾರದವರು ಒಪ್ಪುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಅವರುಗಳನ್ನು ನೇಮಕಮಾಡಿದ ಉದ್ದೇಶ ತಾವು ಹೇಳಿದಂಥ ಉದ್ದೇಶವಲ್ಲ. ಎಲ್ಲರನ್ನೂ ಎಲ್ಲಾ ಕೈಗಾರಿಕೆಗಳಲ್ಲೂ ಪರಿಣತರಾಗಿ ಮಾಡಬೇಕು ಎಂದಲ್ಲ. ಜನರಿಗೆ ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಸ್ಥಾಪನೆಮಾಡುವುದಕ್ಕೆ ಅವಕಾಶವಿದೆಯೋ, ಅಲ್ಲಿ ಯಾರು ಉತ್ಸಾಹಶಾಲಿಗಳಾಗಿದ್ದಾರೋ ಅವರಿಗೆ ಟ್ರೈನಿಂಗ್ ಎಲ್ಲಿ ಕೊಡಿಸಬಹುದು ಎಂಬುದನ್ನು ಪರಿಶೀಲನೆ ಮಾಡುವುದಕ್ಕೂ ಮತ್ತು ಅಂಥವರು ಟ್ರೈನಿಂಗ್ ತೆಗೆದುಕೊಂಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ ಪಕ್ಷದಲ್ಲಿ, ಅವರುಗಳಿಗೆ ಸಹಾಯ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆಯೂ ಸರ್ಕಾರದವರಿಗೆ ಸಲಹೆ ಕೊಡುವ ವಿಷಯದಲ್ಲಿ ಇವರಿಗೆ ತಕ್ಕ ತರಬೇತನ್ನು ಕೊಟ್ಟಿದ್ದಾರೆ. ಗ್ರಾಮಗಳಲ್ಲಿ ಯಾರು ಯಾರು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಇಚ್ಛೆಪಡುತ್ತಾರೋ ಅವರಿಗೆ ಏನು ಸಹಾಯಬೇಕೋ ಅದನ್ನು ಸರ್ಕಾರದವರಿಂದ ಒದಗಿಸುವುದಕ್ಕೆ ಮತ್ತು ಹಣವನ್ನು ಒದಗಿಸಿಕೊಡುವುದಕ್ಕೆ ಏರ್ಪಾಡುಮಾಡುವುದೂ, ತಿಳಿಯದೇ ಇರುವ ವಿಷಯವನ್ನು ತಿಳಿದವರಿಂದ ತಿಳಿಯುವಂತೆ ಮಾಡುವುದೂ ಅವರ ಕರ್ತವ್ಯ.

ಶ್ರೀ ಎ. ಭೀಮಪ್ಪನಾಯಕ್. ಹಾಗಾದರೆ Rural Industrialisation Scheme ನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಅವೃತ್ತಿಯಲ್ಲಿ ಪೆನ್ಶಾಗಿ ಪರಿಣತರಾದ ಕೆಲಸಗಾರರಿಗೆ ಇನ್ನೂ ಹೆಚ್ಚಿನ ದಕ್ಷತೆ ಬರುವ ರೀತಿಯಲ್ಲಿ ಹೇಳಿಕೊಡುವ ಜನರನ್ನೇ ಮುಂದೆ ನೇಮಿಸಬೇಕು ಎಂಬ ಅಭಿಪ್ರಾಯ ಸರಕಾರಕ್ಕೆ ಇದೆಯೇ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕೈಗಾರಿಕೆಗಳಲ್ಲಿ ಯಾರು ಯಾರು ತೊಡಗಬೇಕು ಎಂದು ಇದ್ದಾರೋ ಅಂಥವರನ್ನು ಯಾವ ಕಾರ್ಖಾನೆಗೆ ಕಳುಹಿಸಿದರೆ, ಅಲ್ಲಿ ಟ್ರೈನಿಂಗ್ ಸಮರ್ಪಕವಾಗಿ ಸಿಕ್ಕುತ್ತದೋ, ಅಂಥ ಕಾರ್ಖಾನೆಗೆ ಕಳುಹಿಸಿ ತರಬೇತು ಮಾಡಿಕೊಡುವ ದನ್ನು ಸರ್ಕಾರ ಯೋಚನೆಮಾಡುತ್ತಿದೆ.

ಶ್ರೀ ಎ. ಭೀಮಪ್ಪನಾಯಕ್.—ತರಬೇತು ಮಾಡಿ ಕೊಡುವಾಗ ಅವರಿಗೆ ಬೇಕಾದ ಅನುಕೂಲತೆ ಮತ್ತು ವಿದ್ಯಾರ್ಥಿವೇತನಗಳನ್ನು ಒದಗಿಸಿಕೊಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅಂತಹ ಕೇಸು ಗಳು ಬಂದರೆ, ಸರ್ಕಾರದವರು ಪರಿಶೀಲನೆ ಮಾಡ ತ್ತಾರೆ.

ಶ್ರೀ ಎ. ಭೀಮಪ್ಪನಾಯಕ್.—ಇದಕ್ಕಾಗಿ ಒಂದು ಯೋಜನೆಯನ್ನು ಮಾಡಿ ಈ ರೀತಿ ಟೆಕ್ನಿಕಲ್ ಟ್ರೈನಿಂಗ್ ಕೊಡುವುದಕ್ಕೆ ಎಷ್ಟು ಹಣಬೇಕಾಗಿದೆ ಎನ್ನುವುದನ್ನು ಯೋಜನೆಮಾಡಿದ್ದೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಗ್ರಾಮದಲ್ಲಿ ನಶಿಸಿ ಹೋಗತಕ್ಕ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಸ್ವಲ್ಪ ಉತ್ತೇಜನ ಕೊಡುವುದು ನಮ್ಮ ಮೂಲ ಉದ್ದೇಶ. ಅದರ ಜೊತೆಗೆ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾದ ಪಕ್ಷದಲ್ಲಿ ಸ್ಥಾಪನೆ ಮಾಡುವವರು ಟ್ರೈನಿಂಗ್ ತೆಗೆದುಕೊಳ್ಳಬೇಕೆಂದು ಮುಂದೆ ಬಂದರೆ ಅವರ ಯೋಗ್ಯತೆ ಪರೀಕ್ಷೆ ಮಾಡಿ, ಅವರಿಗೆ ತಕ್ಕಯೋಗ್ಯತೆ ಇದ್ದ ಪಕ್ಷದಲ್ಲಿ ಅವರಿಗೆ ಸರ್ಕಾರದವರೇ ನ್ಯೂನ್ತ ವೆಚ್ಚ ದಿಂದ ಶಿಕ್ಷಣ ಕೊಟ್ಟು ಸಣ್ಣ ಪುಟ್ಟ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದನ್ನು ಯೋಚನೆ ಮಾಡುತ್ತಾರೆ.

ಶ್ರೀ ಎ. ಭೀಮಪ್ಪನಾಯಕ್.—ನಶಿಸಿಹೋಗುವ ಕೈಗಾರಿಕೆಗಳಿಗೆ ಧನಸಹಾಯ ಮಾಡುವ ಪ್ರಶ್ನೆ ಬಂದಾಗ ಆಸ್ತಿ ಪಾಸ್ತಿ ಇಲ್ಲದೆ ಬರೀ ವೃತ್ತಿಯಿಂದ ಜೀವನ ಮಾಡುವವರಿಗೆ ಸಾಲಕೊಡಬೇಕಾದರೆ, ಜಮೀನು ಆಧಾರ ಮಾಡಿದರೆ ಕೊಡುತ್ತೇವೆ, ಇಲ್ಲ ದಿದ್ದರೆ ಇಲ್ಲ ಎಂದು ತಮ್ಮ ಅಧಿಕಾರಿಗಳು ಹೇಳುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈಗ ಇರತಕ್ಕ ವ್ಯವಸ್ಥೆಯಲ್ಲಿ ನಾವು ಸಾಲಕೊಡಬೇಕಾದರೆ ಸಾಲ ಪಾಪಸ್ಸು ಕೊಡುವುದಕ್ಕೆ ತಕ್ಕ ಆಧಾರ ಕೊಡಬೇಕು ಎಂದು ನಿಗಧಿಯಾಗಿದೆ. ಆಸ್ತಿ ಇಲ್ಲದೆ ಇರುವವರಿಗೆ ಆಸ್ತಿ ಇದ್ದು ಇನ್ನೊಬ್ಬರ ಆಧಾರದ ಮೇಲೆ ಸಾಲ ಕೊಡುವ ವಿಷಯ ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ಭೀಮಪ್ಪನಾಯಕ್.—ಹಾಗಿದ್ದರೆ ಇರ ತಕ್ಕ ಸಣ್ಣ ಕೈಗಾರಿಕೆಗಳಲ್ಲಿ ಆಸ್ತಿ ಇಲ್ಲದೆ ಇರುವವರು 100ಕ್ಕೆ 90 ಜನ ಇದ್ದಾರೆ. ಅಂಥವರನ್ನು ಅಭಿವೃದ್ಧಿಗೆ ತರುವುದಕ್ಕೆ ಈಗಿರುವ scheme ನಿಂದ ಪ್ರಯೋಜನವಾಗುವುದಿಲ್ಲವೆಂಬುದು ತಮಗೆ ತಿಳಿದಿದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಾನು ಹೇಳಿದಂತೆ ಎಲ್ಲ ವಿಷಯವನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಸಾಲ ತೆಗೆದುಕೊಳ್ಳುವುದಕ್ಕೆ ಆಸ್ತಿಯನ್ನು ಆಧಾರ ಮಾಡುವುದಕ್ಕೆ ಶಕ್ತಿ ಇಲ್ಲದೆ ಇರುವ ಜನರಿಗೆ ಯಾವ ರೀತಿ ಉತ್ತೇಜನ ಕೊಡಬೇಕು ಎನ್ನುವ ವಿಷಯ ಸರ್ಕಾರದ ತೀವ್ರಾಲೋಚನೆಯಲ್ಲಿದೆ.

Mr. SPEAKER.—The Hon'ble Member is entering into discussion.

ಶ್ರೀ ಬಿ. ರಾಚಯ್ಯ.—16 ಜನ ಆಫೀಸರುಗಳಲ್ಲಿ ಕೈಗಾರಿಕೆ ಇಲಾಖೆಯಲ್ಲಿ ಪರಿಣತರಾದವರು ಎಷ್ಟು ಜನರು ಇದ್ದಾರೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅವರಲ್ಲಿ ಇಬ್ಬರು Superintendents of Industries and Commerce ಇದ್ದಾರೆ.

ಶ್ರೀ ಬಿ. ರಾಚಯ್ಯ.—ಕೈಗಾರಿಕೆ ಇಲಾಖೆಯಲ್ಲಿ ಪರಿಣತರಾಗಿರತಕ್ಕವರು ಇಲ್ಲಿಗೆ ಬರುವುದರಿಂದ, ಕೆಲಸ ಬಹಳ ಸುಗಮವಾಗಿ ನಡೆಯುವುದಕ್ಕೆ ಅವಕಾಶ ವಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮೊದಲೇ ಅನು ಮಾನಕ್ಕೆ ಎಡೆ ಇಲ್ಲದಂತೆ ಹೇಳಿದ್ದೇನೆ. ಕೈಗಾರಿಕೆ ಗಳಲ್ಲಿ ಪರಿಣತರನ್ನೇ ನಾವು ನೇಮಕ ಮಾಡಿಲ್ಲ. ಅವರಿಗೆ ಸೌಮ್ಯನ್ನು ಜಾರಿಗೆ ಕೊಡುವುದಕ್ಕೆ ಅಗತ್ಯ ವಾದ ಒಳ್ಳೆಯ ವಾತಾವರಣ ಬರಲು ಅವಶ್ಯಕವಾಗಿ ಬೇಕಾದ broad-based training ಕೊಟ್ಟಿದ್ದೇವೆ.

ಶ್ರೀ ಬಿ. ರಾಚಯ್ಯ.—ಕೈಗಾರಿಕೆಯ ಲ್ಲಿ ಪರಿಣತ ರಾಗಿರುವವರನ್ನು ಬಿಟ್ಟು ಸಿವಿಲ್ ಆಫೀಸರುಗಳನ್ನು ಇಲ್ಲಿಗೆ ಹಾಕಿರುವ ಉದ್ದೇಶ ಏನು?

ಶ್ರೀ ಎಚ್. ಎಂ. ಚೆನ್ನಬಸಪ್ಪ.—Civil Officers 15-20 ವರ್ಷಗಳು ಕೆಲಸಮಾಡಿ ಎಲ್ಲ ಕ್ಷೇತ್ರ ಗಳಲ್ಲೂ ಕೂಡ ತುಂಬ ಅನುಭವವನ್ನು ಪಡೆದಿದ್ದಾರೆ.

ಶ್ರೀ ಬಿ. ರಾಚಯ್ಯ.—ಕೇಂದ್ರ ಸರ್ಕಾರದವರು small-scale industriesಗೆ ಏನು rules frame ಮಾಡಿದ್ದೀರೋ ಅದನ್ನು liberalise ಮಾಡಿರುವುದ ರಿಂದ, ಕೈಗಾರಿಕೆ ನಡೆಸತಕ್ಕ ಬಡಜನರಿಗೆ ಅನುಕೂಲ ವಾಗುತ್ತದೆ ಎಂದು ನಲಹೆ ನೀಡಿದ್ದಾರೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ವಿಷಯ ಸರ್ಕಾರದ ತೀವ್ರಾಲೋಚನೆಯಲ್ಲದೆ ಎಂದು ಆಗಲೇ ಉತ್ತರಕೊಟ್ಟಿದ್ದೇನೆ.

Sri Mulka GOVINDA REDDY.—Is it a fact that the Minister for Small-Scale Industries is not in agreement with the Rural Industrialisation Scheme ?

Sri H. M. CHANNABASAPPA.—Who said so ?

Sri Mulka GOVINDA REDDY.—The report is current.

Mr. SPEAKER.—You can say yes or no.

Sri H. M. CHANNABASAPPA.—The Minister for Industries is in entire agreement with the principles laid down in the Rural Industrialisation Scheme.

---

9 A.M.

Cattle fodder in Forest areas (Measures to grow).

Q.—289. Sri G. PAPANNA (Sidlaghatta-Chikballapur).—

Will the Government be pleased to state:—

(*a*) whether they are aware that a kind of grass called "*Badehullu*" unfit for use as fodder to the cattle is